ಮೂಲ ದಾವಾ ನಂ. 81/2016

ಪಿ. ಡಬ್ಲುಃ 2

ಸಾಕ್ಷಿಯನ್ನು ದಿನಾಂಕ: 02-09-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎಚ್. ಯು. ಎನ್. ವಕೀಲರಿಂದಃ**

ಪಿ ಡಬ್ಲು 01 ರವರು ಈಗ ಮೃತಪಟ್ಟಿದ್ದು ಅವರು ಹಾಜರುಪಡಿಸಿದ ನಿಪಿ 1 ರಿಂದ 15ರ ದಾಖಲೆಗಳನ್ನು ಪರಿಗಣಿಸಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಸ್. ವಿ. ಎ. ವಕೀಲರಿಂದಃ**

ದಾವೆ ದಾಖಲಿಸಲು ಸಂಪೂರ್ಣ ಮಾಹಿತಿಯನ್ನು ನನ್ನ ತಾಯಿ ನೀಡಿದ್ದರು. ವಕೀಲರಿಗೆ ನನ್ನ ತಾಯಿ ಮಾಹಿತಿ ಕೊಡುವಾಗ ನಾನು ಕೂಡಾ ಅವರ ಜೊತೆ ಹೋಗಿದ್ದೆ. ದಾವಾದಲ್ಲಿ ಬರೆದ ಎಲ್ಲಾ ಮಾಹಿತಿ ಸತ್ಯವಾಗಿದೆ. ನನ್ನ ಮನೆ ಕಾಸರಕೋಡಿನಲ್ಲಿದೆ. ನನ್ನ ಮದುವೆಯಾಗಿ ಈಗ 35 ವರ್ಷವಾಯಿತು. ಮದುವೆಯಾದ ಮೇಲೆ ನಾನು ಕಾಸರಕೋಡಿನಲ್ಲಿಯೇ ವಾಸವಿದ್ದೇನೆ. 1 ನೇ ವಾದಿ ಬೇರೊಳ್ಳಿಯಲ್ಲಿಯೇ ಅವರ ತಾಯಿ ಮನೆಯಲ್ಲಿ ವಾಸವಿದ್ದಳು. ನಾನು ಹುಟ್ಟಿದಾಗಿನಿಂದ ಬುದ್ದಿಬರುವವರೆಗೂ ಬೇರೊಳ್ಳಿಯಲ್ಲಿಯೇ ವಾಸವಿದ್ದೆ. ನನ್ನ ಅಜ್ಜಿಯ ಮನೆಯಲ್ಲಿ ಮಾವನ ಮಗ ಇದ್ದು ಆತ ನನ್ನ ಮದುವೆ ಮಾಡಿಸಿದ್ದ. ಆತ ಈಗ ಮೃತಪಟ್ಟಿದ್ದು ಆತನಿಗೆ ಮೂರು ಜನ ಮಕ್ಕಳು ಇದ್ದಾರೆ. ಅವರಿಗೆ 3-4 ಎಕರೆ ಜಮೀನು ಇದ್ದು ಅವರು ಕೃಷಿ ಮಾಡುತ್ತಿದ್ದಾರೆ. ನನ್ನ ಮಾವ ಅನಕ್ಷರಸ್ಥನಾಗಿದ್ದು ಈಗ ಮೃತಪಟ್ಟಿರುತ್ತಾರೆ. ಮಾವನ ಮಗ 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದ. ನಾನು 1 ಅಥವಾ 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಶಾಲೆಯನ್ನು ನಗರೆ ಬೇರೊಳ್ಳಿ ಶಾಲೆಯಲ್ಲಿ ಕಲಿತಿದ್ದೆ. ಅದು ಕನ್ನಡ ಮಾಧ್ಯಮ ಶಾಲೆಯಾಗಿರುತ್ತದೆ.

ಈ ದಾವೆಯನ್ನು ಯಾಕೆ ಹೂಡಿದ್ದೀರಿ ಎಂದರೆ ಸಾಕ್ಷಿ ನಮಗೆ ಪಾಲು ಸಿಗಬೇಕು ಎಂದು ಹೂಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಾಯಿ ನನಗೆ ಪಾಲು ಬರಬೇಕು ಎಂದು ಈ ದಾವೆಯನ್ನು ದಾಖಲಿಸಿದ್ದರು. ದಾವಾ ಆಸ್ತಿಗಳು ಕೊಳಗದ್ದೆ ಖರ್ವಾದಲ್ಲಿ ಇವೆ. ಸದ್ರಿ ಪ್ರದೇಶದಿಂದ ಬೇರೊಳ್ಳಿ 4-5 ಕಿ ಮೀ ಆಗುತ್ತದೆ. ನದಿಯಿಂದ ಹೋದರೆ ಹತ್ತಿರ ಆಗುತ್ತದೆ. ನನ್ನ ತಾಯಿ ಮೃತ ಹನುಮಂತ ನಾಗಪ್ಪ ಗೌಡನನ್ನು ಮದುವೆಯಾಗಿದ್ದು ಆ ಮೂಲಕ ನನಗೆ ಹಕ್ಕು ಬರುತ್ತದೆ. ನನ್ನ ಮತ್ತು ನನ್ನ ತಾಯಿಯ ಚುನಾವಣಾ ಗುರುತಿನ ಚೀಟಿ, ರೇಷನ್ ಕಾರ್ಡ ಎಲ್ಲವೂ ಬೇರೊಳ್ಳಿಯಲ್ಲಿರುವ ನನ್ನ ಮಾವನ ಮನೆಯ ವಿಳಾಸದಲ್ಲಿ ಇರುತ್ತದೆ. ಹನುಮಂತ ನಾಗಪ್ಪ ಗೌಡ ಕೊಳಗದ್ದೆಯಲ್ಲಿ ವಾಸವಿದ್ದರು. ನಾನು ಅವರ ಮನೆಗೆ ನನ್ನ ಮದುವೆ ಸಮಯದಲ್ಲಿ 2 ಬಾರಿ ಹೋಗಿದ್ದೆ. ಅವರ ಮನೆ ಪಕ್ಕದಲ್ಲಿ ಒಂದು ದೇವಸ್ಥಾನ ಇತ್ತು. ಆ 2 ಬಾರಿ ಬಿಟ್ಟರೆ ನಾನು ಅವರ ಮನೆಗೆ ಯಾವತ್ತೂ ಹೋಗಿದ್ದು ಇರುವುದಿಲ್ಲ. ನಾನು ಅವರ ಮನೆಗೆ ಹನುಮಂತ ನಾಗಪ್ಪ ಗೌಡ ಮೃತಪಟ್ಟ ನಂತರ ಹೋಗಿರುತ್ತೇನೆ. ಅವರ ಜೊತೆ ಒಂದು ಹೆಂಗಸು ವಾಸವಿದ್ದು, ಆಕೆಯ ಮದುವೆ ಆತನ ಜೊತೆ ಆಗಿತ್ತಾ ಇಲ್ಲವಾ ನನಗೆ ಗೊತ್ತಿಲ್ಲ. ಆಕೆಯ ಜೊತೆ ಒಂದು ಮಗಳು ಕೂಡಾ ವಾಸವಿದ್ದರು. ಅವರುಗಳೆಂದರೆ 1 ಮತ್ತು 2 ನೇ ಪ್ರತಿವಾದಿಯರಾಗಿರುತ್ತಾರೆ. ನನಗೆ ಬುದ್ದಿಬಂದಾಗಿನಿಂದಲೂ 1 ಮತ್ತು 2 ನೇ ಪ್ರತಿವಾದಿಯರು ಸದ್ರಿ ಹನುಮಂತ ನಾಗಪ್ಪ ಗೌಡನ ಜೊತೆ ವಾಸವಿದ್ದದ್ದು ನನಗೆ ಗೊತ್ತಾಗಿರುತ್ತದೆ. ಆ ಕುರಿತು ನಾನಾಗಲಿ, ನನ್ನ ತಾಯಿಯಾಗಲಿ ತಕರಾರು ಮಾಡಿದ್ದು ಇಲ್ಲ ಎಂದರೆ ಸಾಕ್ಷಿ ಅವರು ಪಾಲು ಕೊಡುತ್ತೇನೆ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಾವು ಹನುಮಂತ ನಾಗಪ್ಪ ಗೌಡನ ಹತ್ತಿರ ಯಾವತ್ತು ಪಾಲು ಕೇಳಿದ್ದು ಇರುವುದಿಲ್ಲ. ಸಾಕ್ಷಿ ಮುಂದುವರಿದು ಆಗ ನನಗೆ ಚಿಕ್ಕ ವಯಸ್ಸು ಎಂದು ನುಡಿಯುತ್ತಾರೆ. ನನ್ನ ತಾಯಿ ಕೂಡಾ ಯಾವತ್ತೂ ಹನುಮಂತ ನಾಗಪ್ಪ ಗೌಡನ ಜೊತೆ ಉಳಿದುಕೊಂಡು ಬಂದಿದ್ದು ಇಲ್ಲ ಎಂದರೆ ಸರಿ. ಆಕೆ

ಒಬ್ಬಳೆ ಆತನ ಜೊತೆ ವಾಸವಿದ್ದದ್ದು ಇಲ್ಲ ಎಂದು ನುಡಿಯುತ್ತಾರೆ. ಹನುಮಂತ ನಾಗಪ್ಪ ಗೌಡನಿಗೆ ಸಹೋದರ ಸಹೋದರಿಯರು ಎಷ್ಟು ಜನ ಇದ್ದಾರೆ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಆತನಿಗೆ ಒಬ್ಬ ಅಕ್ಕ ಇದ್ದಾರೆ ಎಂದು ನನ್ನ ತಾಯಿ ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಸದ್ರಿಯವರ ಅಕ್ಕನ ಹೆಸರನ್ನು ನನಗೆ ನನ್ನ ತಾಯಿ ತಿಳಿಸಿರುವುದಿಲ್ಲ.

ಸದ್ರಿ ಹನುಮಂತ ನಾಗಪ್ಪ ಗೌಡರ ಮನೆಯ ಸುತ್ತ ಅನೇಕ ಮನೆಗಳಿವೆ ಎಂದರೆ ಸಾಕ್ಷಿ ಸದ್ರಿ ಮನೆಯ ಹಿಂಭಾಗದಲ್ಲಿ 2 ಮನೆ, ಮುಂಭಾಗದಲ್ಲಿ ಅಂಗಡಿಗಳು ಇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ . ಹನುಮಂತ ನಾಗಪ್ಪ ಗೌಡ ಮೃತಪಟ್ಟ ನಂತರ ಸದ್ರಿ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಬಂದಿವೆ ಎಂದರೆ ಸರಿ . ಹನುಮಂತ ನಾಗಪ್ಪ ಗೌಡ ಯಾವಾಗ ಮೃತಪಟ್ಟಿರುತ್ತಾರೆ ಎಂದು ನಾನು ಮತ್ತು ನನ್ನ ತಾಯಿ ವಿಚಾರ ಮಾಡಿದ್ದು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.